

# ಶ್ರುತಿ ಮ್ಯೂಸಿಕ್

ಶ್ರುತಿ ಹಾಸನ್ ಕೋವಿಡ್ ರಜೆಯೆಂದು ಸುಮ್ಮನೆ ಕುಳಿತಿಲ್ಲ. ಕೈಲಿರುವ ಚಿತ್ರಗಳ ಶೂಟಿಂಗ್ ಮುಂದಕ್ಕೆ ಹೋಗಿರಬಹುದು, ಆದರೆ ಆಕೆಗೆ ಕೈತುಂಬ ಕೆಲಸವಿದೆ. ತಾನು ಹಾಡಿರುವ ಹಾಡುಗಳ ಮೊದಲ ಮ್ಯೂಸಿಕ್ ಆಲ್ಬಂ ತರುವುದರಲ್ಲಿ ಆಕೆ ಬ್ಯುಸಿ. ಇಂಗ್ಲೆಂಡಿನ ವಿವಿಧೆಡೆ ಆಕೆ ನಡೆಸಿಕೊಟ್ಟ ಲೈವ್ ಮ್ಯೂಸಿಕ್ ಕಾರ್ಯಕ್ರಮಗಳ ಹಲವು ಅಪರೂಪದ ದೃಶ್ಯ ತುಣುಕಗಳನ್ನು ಯೂಟ್ಯೂಬ್ ಚಾನೆಲ್‌ಗೆ ಏರಿಸುತ್ತಿರುವ ಶ್ರುತಿ, ಮೊದಲ ಆಲ್ಬಂ ಬಗ್ಗೆ ಕುತೂಹಲ ಕೆರಳಿಸುವಲ್ಲಿ ಯಶಸ್ವಿಯಾಗಿದ್ದಾರೆ.

'ಸಾಮಾಜಿಕ ಜಾಲತಾಣದಲ್ಲಿ ಅಭಿಮಾನಿಗಳ ಸಂವಹನ ಮಜಾ ಕೊಡುವಂತಿರುತ್ತದೆ. ಕ್ರಿಯಾಶೀಲ ಯೂಟ್ಯೂಬ್ ಚಾನೆಲ್ ಒಂದನ್ನು ರೂಪಿಸುವುದು ನನ್ನ ಮುಂದಿನ ಕೆಲಸ' ಎಂದಿದ್ದಾರೆ ಶ್ರುತಿ. ತಮಿಳು, ತೆಲುಗು ಮತ್ತು ಹಿಂದಿ ಮೂರೂ ಭಾಷೆಗಳಲ್ಲಿ ಸಿನಿಮಾ ಹಿನ್ನೆಲೆ ಗಾಯಕಿ ಆಗಿರುವ ಶ್ರುತಿಗೆ ವಿಶ್ವದಾದ್ಯಂತ ಮಿಶ್ರ ಶ್ರೋತೃಗಳಿದ್ದಾರೆ. ಆದರೆ ಇಂಗ್ಲೆಂಡಿನ ವಿವಿಧ ನಗರಗಳಲ್ಲಿ ಶ್ರುತಿ ಕಾರ್ಯಕ್ರಮ ಕೊಟ್ಟಾಗ ಅಲ್ಲಿ ಆಕೆಯ ಇಂಗ್ಲಿಷ್ ಹಾಡುಗಳನ್ನು ಕೇಳಲು ಬಂದವರೇ ಹೆಚ್ಚಿದ್ದರಂತೆ. ಹಿಂದಿ, ತಮಿಳು ಹಾಡುಗಳನ್ನು ಕೇಳಿದವರು 'ಓಹ್, ಶ್ರುತಿ ಇಂಗ್ಲಿಷ್‌ನಲ್ಲಿ ಹಾಡು ಬರೆದು ತಮಿಳಿನಲ್ಲಿ ಹಾಡುತ್ತಿದ್ದಾಳೆ' ಎಂದು ಖುಷಿ ಪಟ್ಟರಂತೆ. ಹಾಗೆಂದು ಸ್ವತಃ ಶ್ರುತಿ ಸಂದರ್ಶನವೊಂದರಲ್ಲಿ ಹೇಳಿದ್ದಾರೆ.

ಶ್ರುತಿ ನಟಿಸಲಿರುವ ಹೊಸ ಸಿನಿಮಾ 'ಯಾರಾ' ಥ್ರಿಲ್ಲರ್ ಕಥೆ ಹೊಂದಿದೆ. ನಾಲ್ವರು ಕುಖ್ಯಾತ ಕ್ರಿಮಿನಲ್‌ಗಳ ಸ್ನೇಹದ ಕಥೆ. ಭಾರತನೇಪಾಳ ಗಡಿಯಲ್ಲಿ ಶೂಟಿಂಗ್ ಫಿಕ್ಸ್ ಆಗಿದೆ. ಫ್ರೆಂಚ್ ಭಾಷೆಯಲ್ಲಿ ಬಂದ 'ಎ ಗ್ಯಾಂಗ್ ಸ್ಟೋರಿ' ಸಿನಿಮಾದ ಹಿಂದಿ ಅವತರಣಿಕೆಯೇ 'ಯಾರಾ'. ಕೋವಿಡ್ ಮುಗಿಯುವವರೆಗೆ ಶೂಟಿಂಗ್ ನಡೆಸುವಂತಿಲ್ಲ. ಅದಕ್ಕೂ ಮುನ್ನ ನನ್ನ ಮೊದಲ ಮ್ಯೂಸಿಕ್ ಆಲ್ಬಂ ಬರಲಿದೆ ಎಂದಿದ್ದಾರೆ ಶ್ರುತಿ.





# ಕಂಗನಾ- ತಾಪ್ಸಿ ಜಗಳ

'ಕಂಗನಾ ಜೊತೆಗೆ ಜಗಳಕ್ಕೆ ಹೊರಟರೆ ಆ ಜಗಳ ಯಾವತ್ತೂ ಕೊನೆಗೊಳ್ಳುವುದಿಲ್ಲ' ಎನ್ನುವ ಬಾಲಿವುಡ್‌ನ ನಂಬಿಕೆ ನಿಜವಾಗುವಂತೆ, ಈಗ ಕಂಗನಾ ಮತ್ತು ತಾಪ್ಸೀ ಪನ್ನೂ ನಡುವಣ ಕೋಳಿಜಗಳ ಮುಂದುವರಿದಿದೆ. ಟಿವಿ ಚಾನೆಲ್ ಒಂದಕ್ಕೆ ಸಂದರ್ಶನ ನೀಡಿದ ಕಂಗನಾ 'ತಾಪ್ಸಿ ಮತ್ತು ಸ್ವರಾ ಭಾಸ್ಕರ್ ಇಬ್ಬರೂ ಎಷ್ಟೇ ಜನರ ಬೂಟು ನೆಕ್ಕಿದರೂ ಸಿನಿಮಾಗಳಲ್ಲಿ ಮೇಲೆ ಬರಲು ಆಗುತ್ತಿಲ್ಲ. ತಾಪ್ಸಿಗೆ ಹಲವು ಅವಕಾಶಗಳು ಕೈತಪ್ಪಿವೆ. ಇಬ್ಬರೂ ಬಿ ಗ್ರೇಡ್ ನಟಿಯರು' ಎಂದು ಹಿಗ್ಗಾಮುಗ್ಗಾ ಜಾಡಿಸಿದ್ದಾಳೆ.

'ಹೌದು, ನನಗೆ ಸಿಕ್ಕಿದ ಹಲವು ಅವಕಾಶಗಳು ತಾರಾಮಕ್ಕಳಿಂದಾಗಿ ಕೈತಪ್ಪಿದೆ. ಅದರಲ್ಲೇನಿದೆ ವಿಶೇಷ. ಹಾಗೆಂದು ನಟಿಸಿದ ಚಿತ್ರಗಳಲ್ಲಿ ನನ್ನ ಸಾಧನೆಯನ್ನು ನೀವು ಅಲ್ಲಗಳೆಯಲಾಗದು. ನನ್ನ ಸಾಮರ್ಥ್ಯದಿಂದಲೇ ಇಲ್ಲಿಯವರೆಗೆ ಪಯಣ ಬೆಳೆಸಿದ್ದೇನೆ' ಎಂದು ತಾಪ್ಸೀ ಈ ಟೀಕೆಗೆ ಪ್ರತ್ಯುತ್ತರ ನೀಡಿದ್ದಾಳೆ.

ಈ ಜಗಳ ಶುರುವಾಗಿದ್ದು ತಾಪ್ಸಿಯ ಸಂದರ್ಶನದಿಂದಲೇ ಎನ್ನುವುದು ಕುತೂಹಲಕರ. ತಿಂಗಳ ಹಿಂದೆ ತಾಪ್ಸೀಗೆ ಸಂದರ್ಶನವೊಂದರಲ್ಲಿ ಕಂಗನಾಗೆ ನೀವು ಏನು ಸಲಹೆ ಕೊಡುತ್ತೀರಿ? ಎನ್ನುವ ಪ್ರಶ್ನೆ ಕೇಳಲಾಗಿತ್ತು. ಆಕೆ ತಕ್ಷಣ 'ಡಬಲ್ ಫಿಲ್ಟರ್ ಬಳಸಬೇಕು' ಎಂದು ಉತ್ತರಿಸಿದ್ದಳು. ಈ ಉತ್ತರದಿಂದ ಕಂಗನಾ ಮತ್ತು ಆಕೆಯ ಸೋದರಿ ಇಬ್ಬರೂ ಸಿಟ್ಟಿಗೆದ್ದಿದ್ದರು.

ಅಂದ ಹಾಗೆ ಈ ಇಬ್ಬರು ಗೆಳತಿಯರ ನಡುವಣ ಜಗಳಕ್ಕೆ ರಾಜಿಯ ಮೂಲಕ ಅಂತ್ಯ ಹಾಡಲು ನಿರ್ದೇಶಕ ಅನುರಾಗ್ ಕಶ್ಯಪ್ ಮಾಡಿರುವ ಯತ್ನಗಳು ವಿಫಲವಾಗಿವೆಯಂತೆ. 'ಇಬ್ಬರೂ ನನ್ನ ಗೆಳತಿಯರು. ತಾಪ್ಸೀ ಪರವಾಗಿ ನಾನು ಕ್ಷಮೆ ಕೇಳುತ್ತೇನೆ ಎಂದರೂ ಕಂಗನಾ ಒಪ್ಪುತ್ತಿಲ್ಲ' ಎಂದು ಅನುರಾಗ್ ಕೈಚೆಲ್ಲಿರುವ ವರದಿ ಬಂದಿದೆ. ಕೋವಿಡ್ ರಜೆಯಲ್ಲಿ ಪುಕ್ಕಟೆ ಮನರಂಜನೆ ಎಂದು ಅಭಿಮಾನಿಗಳೂ ಖುಷಿಯಾಗಿದ್ದಾರೆ!

■ ಬಿಂದು